**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 633/2015 ಸಿಡಬ್ಲೂ : 9 ಪಿಡಬ್ಲೂಃ 5

ಪ್ರಮಾಣವಚನ ಬೋಧಿಸಲಾಯಿತು ದಿಃ 19-06-2025

ಹೆಸರು : ಅನಿಲ್ ಕುಮಾರ್

ತಂದೆ ಹೆಸರು : ರತ್ನಯ್ಯ

ವಯಸ್ಸು : 52 ವರ್ಷ

ಉದ್ಯೋಗ : ಎ ಎಸ್ ಐ ಸ್ಟೆಷನ್ ಬಜಾರ್ ಪೊಲೀಸ್ ಠಾಣೆ, ಕಲಬುರಗಿ

ವಾಸಸ್ಥಳ : ಕಲಬುರಗಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸನ್ 2015 ರಿಂದ 2018 ವರೆಗೆ ಸೇಡಂ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದಿಃ 26-06-2015 ರಂದು ನಾನು ರಾತ್ರಿ 08-00 ಗಂಟೆಯಿಂದ ಬೆಳಿಗ್ಗೆ 09-00 ಗಂಟೆಯ ವರೆಗೆ ಠಾಣಾ ಪ್ರಬಾರದಲ್ಲಿದ್ದಾಗ ರಾತ್ರಿ 11-00 ಗಂಟೆ ಸುಮಾರಿಗೆ ಸರ್ಕಾರಿ ಆಸ್ಪತ್ರೆ ಸೇಡಂ ನಿಂದ ಒಂದು ಎಂ ಎಲ್ ಸಿ ಬಂದ ಮೇರೆಗೆ ನಾನು ಆಸ್ಪತ್ರೆಗೆ ಭೇಟಿ ನೀಡಿ ಚಾ ಸಾ 1 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿ.27-06-2025 ರಂದು 00.30 ಗಂಟೆಗೆ ಸದರಿ ಹೇಳಿಕೆಯ ಆದಾರದ ಮೇಲೆ ಆರೋಪಿತರ ವಿರುದ್ದ ಪ್ರ ವ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗೆ ಕಳುಹಿಸಿರುತ್ತೇನೆ ಸಾಕ್ಷಿಯು ಸದರಿ ಹೇಳಿಕೆಯನ್ನು ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಈಗಾಗಲೇ ಗುರುತಿಸಲಾಗಿತ್ತು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ (ಬಿ ಮತ್ತು ಸಿ) ಎಂದು ಮತ್ತು ಅದೇ ರೀತಿ ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 3 ಎಂದು ಗುರುತಿಸಲಾಯಿತು. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾ ಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 09-30 ಯಿಂದ 10-30 ಗಂಟೆ ವರೆಗೆ ಪಂಚನಾಮೆಯನ್ನು ಜರುಗಿಸಿ ಒಂದು ಹಿಡಿ ಗಾತ್ರದ ಕಲ್ಲನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 2 (ಬಿ ಮತ್ತು ಸಿ ) ಎಂದು

ಗುರುತಿಸಲಾಯಿತು. ನಂತರ ಚಾ ಸಾ 4 ರಿಂದ 7 ರವರ ಹೇಳಿಕೆಯನ್ನು ಪಡೆದುದಕೊಂಡಿರುತ್ತೇನೆ. ನಂತರ ಸದರಿ ಪ್ರಕರಣದ ಕಡತವನ್ನು ಚಾ ಸಾ 10 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ ಃ

ಆರೋಪಿ ಪರ ವಕೀಲರಿಗೆ ಕೂಗಿಸಲಾಗಿ ಗೈರು ಹಾಜರು ಇರುವುದರಿಂದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**